# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 371**
**ಮಾನ್ಯ ಸದಸ್ಯರ ಹೆಸರು : ಡಾ||ತಳವಾರ ಸಾಬಣ್ಣ(ನಾಮನಿರ್ದೇಶನ ಹೊಂದಿದವರು)**
**ಉತ್ತರಿಸಬೇಕಾದ ದಿನಾಂಕ : 19.02.2024**
**ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಶಿಶು ಮತ್ತು ತಾಯಿ ಮರಣ ಪ್ರಮಾಣ ಎಷ್ಟಿದೆ; (ಜಿಲ್ಲಾವಾರು ವಿವರ ನೀಡುವುದು) | ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ತಾಯಿ ಮರಣ ಪ್ರಮಾಣದ ಜಿಲ್ಲಾವಾರು ವಿವರವನ್ನು **ಅನುಬಂಧ-1ರಲ್ಲಿ** ಹಾಗೂ ಶಿಶು ಮರಣ ಪ್ರಮಾಣದ ಜಿಲ್ಲಾವಾರು ವಿವರವನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಆ) | ಸರ್ಕಾರಿ ಆಸ್ಪತ್ರೆಗಳಲ್ಲಿ ಉಪಕರಣಗಳ ಕೊರತೆಯಿಂದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಶಿಶು ಮರಣ ಮತ್ತು ತಾಯಿ ಮರಣ ಪ್ರಮಾಣ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರಿ ಆಸ್ಪತ್ರೆಗಳಲ್ಲಿ ಉಪಕರಣಗಳ ಕೊರತೆಯಿಂದ ಉತ್ತರಕರ್ನಾಟಕದ ಜಿಲ್ಲೆಗಳಲ್ಲಿ ತಾಯಿ ಮರಣ ಪ್ರಮಾಣ ಹೆಚ್ಚಾಗಿರುವ ಮತ್ತು ಯಾವುದೇ ಶಿಶು ಮರಣಗಳು ಸಂಭವಿಸಿರುವ ಬಗ್ಗೆ ವರದಿಯಾಗಿರುವುದಿಲ್ಲ. |
| ಇ) | ಶಿಶು ಮತ್ತು ತಾಯಿ ಮರಣ ಪ್ರಮಾಣ ತಡೆಯಲು ಸರ್ಕಾರಿ ಆಸ್ಪತ್ರೆಗಳಲ್ಲಿ ಉಪಕರಣ ಮತ್ತು ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಲು ಯಾವ ಕ್ರಮಗಳನ್ನು ಕೈಗೊಂಡಿದೆ; | 1. ಉತ್ತರ ಕರ್ನಾಟಕದ 14 ಜಿಲ್ಲೆಗಳಲ್ಲಿ 36 ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆ. 21 ಕಾರ್ಯಗತಗೊಳಿಸಲಾಗಿದೆ. ಉಳಿದ 15 ಆಸ್ಪತ್ರೆಗಳು ನಿರ್ಮಾಣ ಹಂತದಲ್ಲಿರುತ್ತವೆ.<br><br>2. ತಾಯಿ ಮತ್ತು ಮಕ್ಕಳ ಸೇವೆಗಳಿಗೆ ಅವಶ್ಯವಿರುವ ಪೀಠೋಪಕರಣಗಳು ಹಾಗೂ ಸಲಕರಣೆಗಳನ್ನು ಖರೀದಿಸಿ ಸರಬರಾಜು ಮಾಡಲಾಗಿರುತ್ತದೆ ವಿವರವನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.<br><br>3. ಗುಣಮಟ್ಟ ಆರೈಕೆಯನ್ನು ಉತ್ತೇಜಿಸಿ ತಾಯಿ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಲಕ್ಷ್ಯ & MUSQAN ಕಾರ್ಯಕ್ರಮಗಳ ಅನುಷ್ಠಾನ ಮಾಡಲಾಗುತ್ತಿದೆ. ಇದರಲ್ಲಿ 53 ಆಸ್ಪತ್ರೆಗಳನ್ನು ಲಕ್ಷ್ಯ ಅಡಿಯಲ್ಲಿ ಪ್ರಮಾಣೀಕರಿಸಲಾಗಿದೆ ಮತ್ತು 04 ಆಸ್ಪತ್ರೆಗಳನ್ನು MUSQAN ಅಡಿ ಪ್ರಮಾಣೀಕರಿಸಲಾಗಿದೆ.<br><br>ತಾಯಿ ಮರಣ ಹಾಗೂ ಶಿಶು ಮರಣ ಪ್ರಮಾಣವನ್ನು ತಡೆಯಲು ಕೈಗೊಂಡ ಕ್ರಮಗಳ ವಿವರಗಳನ್ನು **ಅನುಬಂಧ-4 & 5ರಲ್ಲಿ** ನೀಡಲಾಗಿದೆ. |

| | | |
|---|---|---|
| ಈ) | ಗ್ರಾಮೀಣ ಪ್ರದೇಶಗಳಲ್ಲಿ ಕುಟುಂಬಸ್ಥರ ನಿರ್ಲಕ್ಷ್ಯವು ಕಾರಣ ಎಂದು ತಿಳಿದಿದ್ದರೂ ಗ್ರಾಮೀಣ ಪ್ರದೇಶಗಳಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರ ಆಶಾ ಕಾರ್ಯಕರ್ತೆಯರ ಮುಖಾಂತರ ಯಾವ ಕ್ರಮಗಳನ್ನು ಕೈಗೊಂಡಿದೆ? | ಗ್ರಾಮೀಣ ಪ್ರದೇಶಗಳಲ್ಲಿ ಕುಟುಂಬಸ್ಥರ ಸಹಯೋಗದೊಂದಿಗೆ ಶಿಶುಗಳ ಆರೋಗ್ಯ ಕಾಪಾಡುವ ಸಂಬಂಧ ಅರಿವು ಮೂಡಿಸಲು ಹಾಗೂ ಸಮಯಕ್ಕೆ ಸರಿಯಾಗಿ ಶಿಶುಗಳ ಆರೋಗ್ಯ ಸೇವೆಗಳನ್ನು ಪಡೆಯಲು ಆಶಾ ಕಾರ್ಯಕರ್ತೆಯರ ಮೂಲಕ ಇಲಾಖೆಯಲ್ಲಿ ಜಾರಿಯಲ್ಲಿರುವ ಕಾರ್ಯಕ್ರಮಗಳ ವಿವರವನ್ನು **ಅನುಬಂಧ-6**ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಆಕುಕ 8 ಎಸ್.ಟಿ.ಕ್ಯೂ 2024**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಅನುಬಂಧ-1<br>ಜಿಲ್ಲಾವಾರು ತಾಯಿ ಮರಣ ಪ್ರಮಾಣ 2023-24 ಜನವರಿ ತಿಂಗಳ ಅಂತ್ಯಕ್ಕೆ<br>(ಮೂಲ ಹೆಚ್.ಎಂ.ಐ.ಎಸ್ ತಂತ್ರಾಂಶ) | | |
|---|---|---|
| ಕ್ರ.ಸಂ | ಜಿಲ್ಲೆ | ತಾಯಿ ಮರಣ ಪ್ರಮಾಣ |
| 1 | ಧಾರವಾಡ | 147 |
| 2 | ಬಳ್ಳಾರಿ | 113 |
| 3 | ಕಲಬುರಗಿ | 75 |
| 4 | ಕೊಪ್ಪಳ | 60 |
| 5 | ಬೀದರ್ | 48 |
| 6 | ಬೆಳಗಾವಿ | 46 |
| 7 | ಯಾದಗಿರಿ | 43 |
| 8 | ವಿಜಯಪುರ | 41 |
| 9 | ಗದಗ | 38 |
| 10 | ಉತ್ತರ ಕನ್ನಡ | 35 |
| 11 | ರಾಯಚೂರು | 32 |
| 12 | ಹಾವೇರಿ | 28 |
| 13 | ಬಾಗಲಕೋಟೆ | 27 |
| 14 | ವಿಜಯನಗರ | 20 |
| | **ಒಟ್ಟು** | **56** |

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿ[illegible]
ಬೆಂಗಳೂರು-560 [illegible]

## ಅನುಬಂಧ-2
## 0-1ವರ್ಷದೊಳಗಿನ ಶಿಶುಗಳ ಮರಣ ಸಂಖ್ಯೆ

| ಕ್ರಮ ಸಂಖ್ಯೆ | ಉತ್ತರ ಕರ್ನಾಟಕದ ಜಿಲ್ಲೆಗಳು | ಏಪ್ರಿಲ್ -2022 ರಿಂದ ಮಾರ್ಚ್-23 | ಏಪ್ರಿಲ್ -2023 ರಿಂದ ಡಿಸೆಂಬರ್-2023 |
|---|---|---|---|
| 1 | ಬಾಗಲಕೋಟೆ | 186 | 83 |
| 2 | ಬೆಳಗಾವಿ | 525 | 119 |
| 3 | ಉತ್ತರ ಕನ್ನಡ | 182 | 95 |
| 4 | ಬಳ್ಳಾರಿ | 627 | 341 |
| 5 | ಬೀದರ್ | 326 | 176 |
| 6 | ವಿಜಯಪುರ | 163 | 141 |
| 7 | ಧಾರವಾಡ | 417 | 160 |
| 8 | ಗದಗ | 203 | 88 |
| 9 | ಕಲಬುರ್ಗಿ | 410 | 347 |
| 10 | ಹಾವೇರಿ | 101 | 41 |
| 11 | ಕೊಪ್ಪಳ | 533 | 359 |
| 12 | ರಾಯಚೂರು | 716 | 432 |
| 13 | ವಿಜಯನಗರ | 99 | 49 |
| 14 | ಯಾದಗಿರಿ | 96 | 76 |
| | **ಒಟ್ಟು** | **4584** | **2507** |

**ಉಪ ನಿರ್ದೇಶಕರು – ಮಕ್ಕಳ ಆರೋಗ್ಯ**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
ಆರೋಗ್ಯಸೌಧ, ಮಾಗಡಿ ರಸ್ತೆ, ಬೆಂಗಳೂರು - 560023

## ಅನುಬಂಧ-3

### ಉತ್ತರ ಕರ್ನಾಟಕ ಜಿಲ್ಲೆಗಳಿಗೆ ತಾಯಿ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಉಪಕರಣ ಸರಬರಾಜು ಮಾಡಿರುವ ಆರೋಗ್ಯ ಕೇಂದ್ರಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ಅಡಿಯಲ್ಲಿ | ಲಕ್ಷ್ಯ ಕಾರ್ಯಕ್ರಮದಡಿಯಲ್ಲಿ |
|---|---|---|---|
| 1 | ಧಾರವಾಡ | KIMS ಹುಬ್ಬಳ್ಳಿ | |
| | | MCH ಧರವಾಡ | |
| 2 | ಬಳ್ಳಾರಿ | MCH ಬಳ್ಳಾರಿ | ಸಾ ಆ ಸಂಡೂರು |
| | | | ಕುಡ್ಲಿಗಿ |
| | | | ಕಂಪ್ಲಿ |
| 3 | ಕಲಬುರಗಿ | MCH ಕಲಬುರಗಿ | ಸಾ ಆ ಅಳಂದ |
| | | | ಸಾ ಆ ಅಫ್ಜಲ್ ಪುರ |
| | | | ಸಾ ಆ ಚಿಂಚೊಳಿ |
| | | | ಸಾ ಆ ಸೇಡಂ |
| 4 | ಕೊಪ್ಪಳ | MCH ಗಂಗಾವತಿ | ಸಾ ಆ ಯಲಬುರಗ |
| | | ಸಾ ಆ ಕುಷ್ಟಗಿ | ಸ ಆ ಕೇಂದ್ರ ಕರಟಗಿ |
| | | ಜಿ ಆ ಕೊಪ್ಪಳ | |
| 5 | ಬೀದರ್ | ಸಾ ಆ ಬಸವಕಲ್ಯಾಣ | ಸಾ ಆ ಹುಮನಬಾದ್ |
| | | MCH ಬೀದರ್ | ಸಾ ಆ ಬಾಲ್ಕಿ |
| | | ಜಿ ಆ ಬೀದರ್ | |
| 6 | ಬೆಳಗಾವಿ | ಸಾ ಆ ಖಾನಾಪುರ | ಸಾ ಆ ಹುಕ್ಕೇರಿ |
| | | ಸಾ ಆ ಚಿಕ್ಕೋಡಿ | ಸಾ ಆ ಅಥಣಿ |
| | | ಸಾ ಆ ಬೈಲಹೊಂಗಲ | ಸಾ ಆ ರಾಮದುರ್ಗ |
| | | MCH ಗೋಕಕ್ | |
| | | ಜಿ ಆ ಬೆಳಗಾವಿ | |
| 7 | ಯಾದಗಿರಿ | ಜಿ ಆ ಯಾದಗಿರಿ | ಸಾ ಆ ಶಹಾಪುರ |
| | | | ಸಾ ಆ ಸುರಪುರ |
| 8 | ವಿಜಯಪುರ | ಜಿ ಆ ವಿಜಯಪುರ | ತಾ ಆ ಇಂಡಿ |
| | | | ತಾ ಆ ಬಸವನ ಬಾಗೇವಾಡಿ |
| 9 | ಗದಗ | | ಸಾ ಆ ಶಿರಹಟ್ಟಿ |
| | | | ಸಾ ಆ ಮುಂಡರಗಿ |
| 10 | ಉತ್ತರ ಕನ್ನಡ | ಸಾ ಆ ಶಿರಸಿ | ಸಾ ಆ ಹೊನ್ನಾವರ |
| | | | ಜಿ ಆ ಕಾರವಾರ |
| 11 | ರಾಯಚೂರು | ಸಾ ಆ ಸಿಂಧನೂರು | ಸಾ ಆ ದೇವದುರ್ಗ |
| | | ಸಾ ಆ ಲಿಂಗಸುಗೂರು | |
| | | ಜಿ ಆ ರಾಯಚೂರು | |
| 12 | ಹಾವೇರಿ | ಜಿ ಆ ಹಾವೇರಿ | ಸಾ ಆ ಹಾನಗಲ್ |
| | | | ಸಾ ಆ ರಾಣೇಬೆನ್ನೂರ |
| 13 | ಬಾಗಲಕೋಟೆ | ಸಾ ಆ ಜಮಖಂಡಿ | ಸಾ ಆ ಬಾದಾಮಿ |
| | | ಜಿ ಆ ಬಾಗಲಕೋಟೆ | ಸಾ ಆ ಹುನಗುಂದ |
| | | | ಸಾ ಆ [illegible] |
| 14 | ವಿಜಯನಗರ | MCH ಹೊಸಪೇಟೆ | ಸಾ ಆ ಹಗರಿಬೊಮ್ಮನಹಳ್ಳಿ |
| | | | ಸಾ ಆ ಕೂಡ್ಲಿಗಿ |
| | | | ಸಾ ಆ ಹೂವಿನಹಡಗಲಿ |
| | ಒಟ್ಟು | 24 | 31 |

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009

**ಅನುಬಂಧ-1 ಪ್ರಶ್ನೆ-371**

1. **ಗರ್ಭಿಣಿ ಆರೋಗ್ಯದ ಅಂಶಗಳು**
   - ಅನಿಮೀಯ- ಕರ್ನಾಟಕ ರಾಜ್ಯದಲ್ಲಿ ಗರ್ಭಾವಸ್ಥೆಯಲ್ಲಿ ರಕ್ತ ಹೀನತೆಯನ್ನು ತಡೆಗಟ್ಟಲು iron sucrose ಚುಚ್ಚುಮದ್ದನ್ನು ತೀವ್ರತರ ರಕ್ತ ಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಬಾಣಂತಿಯರಿಗೆ ಅಲ್ಲದೆ ಮಾಧ್ಯಮಿಕ ಅಂದರೆ Hb % 10 ಗ್ರಾಂ ಗಿಂತ ಕೆಳಗಡೆ ಇರುವ ಎಲ್ಲಾ ಗರ್ಭಿಣಿ ಬಾಣಂತಿಯರಿಗೂ ನೀಡಲಾಗುತ್ತಿದೆ.
   - ಅಧಿಕ ರಕ್ತದ ಒತ್ತಡ & ಅಪೂರ್ಣ ಗರ್ಭಿಣಿ ಆರೈಕೆ – ಈ ಅಂಶವನ್ನು ಪ್ರತಿ ತಿಂಗಳು ನಡೆಸಲಾಗುವ PMSMA & e-PMSMA ಕಾರ್ಯಕ್ರಮಗಳಿಂದ ಸರಿಪಡಿಸಲಾಗುತ್ತಿದೆ.
   - ಗರ್ಭಾವಸ್ಥೆಯ ಮೊದಲ ತ್ರೈಮಾಸಿಕದಲ್ಲಿ ಶೇಕಡ 100ರಷ್ಟು ಆಗದಿರುವುದು- ಇದನ್ನು ಸರಿಪಡಿಸಲು ಇಲಾಖೆಯ ಮುಂಚೂಣಿ ಕಾರ್ಯಕರ್ತೆಯರಿಂದ ಮನೆ ಭೇಟಿಯನ್ನು ಉತ್ತೇಜಿಸಿ ಮೂತ್ರ ತಪಾಸಣೆಯನ್ನು ನೆರವೇರಿಸಿ ನೋಂದಾಸುವ ಕ್ರಮಕ್ಕೆ ಹೆಚ್ಚು ಪಾಶಸ್ತ್ಯವನ್ನು ನೀಡಲಾಗುವುದು ಇದಕ್ಕೆ ಸೂಕ್ತ IEC ಯನ್ನು ಬಳಸಲಾಗುವುದು.
   - ಅತೀವ ರಕ್ತ ಸ್ರಾವ & ಹೆರಿಗೆ ಸಮಯದ ಸೋಂಕು – ಈ ಅಂಶಗಳನ್ನು ಸೇವಾ ಪೂರೈಕೆ ದಾರರಿಗೆ ಕೌಶಲ್ಯವನ್ನು ದಕ್ಷತಾ ತರಬೇತಿ ಮೂಲಕ ನಿವಾರಿಸಲಾಗುತ್ತಿದೆ.

2. **ಇತರೆ ಅಂಶಗಳು**
   - ಬಾಲ್ಯ ವಿವಾಹ ಮತ್ತು ಅಪ್ರಾಪ್ತ ಗರ್ಭದಾರಣೆ
   - ಪೌಷ್ಠಕಾಂಶದ ಕೊರತೆ

   ಈ ಮೇಲ್ಕಂಡ 2 ಅಂಶಗಳನ್ನು ಮಹಿಳ ಮತ್ತು ಮಕ್ಕಳ ಅಬಿವೃದ್ದಿ ಇಲಾಖೆಯು ಸರಿಪಡಿಸುತ್ತಿದೆ.

3. **ಜನನಿ ಸುರಕ್ಷಾ ಯೋಜನೆ(JSY):**

ಆರೋಗ್ಯ ಸಂಸ್ಥೆಗಳ ಲ್ಲಿ ಹೆರಿಗೆ ಮಾಡಿಸಿಕೊಂಡಿದ್ದಲ್ಲಿ **BPL** ವರ್ಗಕ್ಕೆ ಸೇರಿದ ಗರ್ಭಿಣಿಯರಿಗೆ ಹೆರಿಗೆಯಾದ ಕೂಡಲೇ **ರೂ.600/700** ಗಳನ್ನು ನೇರ ನಗದು ವರ್ಗಾವಣೆ ಮೂಲಕ ರಾಷ್ಟ್ರೀಯ ಆರೋಗ್ಯ ಅಭಿಯಾನದ ವತಿಯಿಂದ ನೀಡಲಾಗುತ್ತಿದೆ. ಈ ಯೋಜನೆಯಿಂದ ಸಾಂಸ್ಥಿಕ ಹೆರಿಗೆ ಗಳಿಗೆ ಉತ್ತೇಜನ ನೀಡಿ ತಾಯಿ ಮರಣವನ್ನು ಕಡಿಮೆ ಮಾಡಲು ಸಹಾಯಕವಾಗಿರುತ್ತದೆ.

4. **ಜನನಿ ಶಿಶು ಸುರಕ್ಷಾ ಕಾರ್ಯಕ್ರಮ(JSSK):**

ಜನನಿ ಶಿಶು ಸುರಕ್ಷಾ ಕಾರ್ಯಕ್ರಮ(JSSK) ಕಾರ್ಯಕ್ರಮ ಈ ಯೋಜನೆಯಡಿಲ್ಲಿ ಕೆಳಕಂಡ 5 ಉಪಯುಕ್ತ components ಗಳು **ಎಲ್ಲಾವರ್ಗದ** ಗರ್ಭಿಣಿ ಮತ್ತು ಬಾಣಂತಿಯರಿಗೆ ಉಚಿತವಾಗಿರುತ್ತವೆ.

1. ಉಚಿತ ಊಟ
2. ಉಚಿತ ರಕ್ತದ ಬಾಟಲಿ
3. ಉಚಿತ ಔಷಧಿ ಮತ್ತು consumables.
4. ಉಚಿತ ಸಾರಿಗೆ.
5. ಉಚಿತ ಪ್ರಯೋಗಾಲಯ ಪರೀಕ್ಷೆಗಳು

ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009

**5. ಲಕ್ಷ್ಯ ಕಾರ್ಯಕ್ರಮದ ಅನುಷ್ಠಾನ:**

ಲಕ್ಷಯ ಕಾರ್ಯಕ್ರಮ ರಾಜ್ಯದ ಸಾರ್ವತ್ರಿಕ ಹೆರಿಗೆ ಆಸ್ಪತ್ರೆಯಲ್ಲಿ ಗುಣಮಟ್ಟದ ಹೆರಿಗೆ ಸೇವೆಗಳನ್ನು ಮತ್ತು ನವಜಾತ ಶಿಶು ಸೇವೆಗಳನ್ನು ನೀಡಿ ತಾಯಿ ಮರಣ & ನವಜಾತ ಶಿಶು ಮರಣವನ್ನು ಕಡಿಮೆಮಾಡುವ ಉದ್ದೇಶದಿಂದ ಉತ್ತರಕರ್ನಾಟಕ ಭಾಗದಲ್ಲಿ **70** ಹೆರಿಗೆ ಆಸ್ಪತ್ರೆಗಳಲ್ಲಿ ಕಾರ್ಯಕ್ರಮವು ಅನುಷ್ಠಾನಗೊಂಡು ತಾಯಿ ಮರಣವನ್ನು ಕಡಿಮೆ ಮಾಡಲು ಅನುಕೂಲವಾಗುತ್ತಿದೆ. ಇದುವರೆಗೂ 53 ಹೆರಿಗೆ ಆಸ್ಪತ್ರೆಗಳು ಲಕ್ಷ್ಯ ಕಾರ್ಯ ಕ್ರಮದಡಿಯಲ್ಲಿ certification ಸಾಧಿಸಿರುತ್ತವೆ.

**6. ಪ್ರಸೂತಿ ತೀವ್ರ ನಿಗಾ ಘಟಕಗಳು:**

ಉತ್ತರಕರ್ನಾಟಕ ಭಾಗದಲ್ಲಿ **12** ಜಿಲಾ ಆಸ್ಪತ್ರೆಗಳ ಲ್ಲಿ ಪ್ರಸೂತಿ ತೀವ್ರ ನಿಗಾ ಘಟಕಗಳನ್ನುಸ್ಥಾಪಿಸಲಾಗಿದ್ದು ಇದರಿಂದ ಗರ್ಭಾವಸ್ಥೆ ಮತ್ತು ಪ್ರಸೂತಿಯಿಂದ ಉಂಟಾಗುವ ಮಾರಣಾಂತಿಕ ತೊಡುಕುಗಳನ್ನು ನಿವಾರಿಸಲು ಹಾಗೂ ರೋಗಿಯನ್ನು ಉಳಿಸಲಿ ಸಹಾಯವಾಗುತ್ತಿದೆ.

**7. ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ನಿರ್ಮಾಣ:**

ಇದುವರೆಗೂ 21 ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ನಿರ್ಮಿಸಲಾಗಿದ್ದು ಇದರಿಂದ ಗರ್ಭಿಣಿ & ಬಾಣಂತಿಯರಿಗೆ ಆರೈಕೆಯ ಪ್ರಾಶಸ್ತ್ಯವನ್ನು ನೀಡಲಾಗುತ್ತಿದೆ.

**8. FRUs ಗಳ ಬಲಪಡಿಸುವಿಕೆ:**

ಉತ್ತರಕರ್ನಾಟಕ ಭಾಗದಲ್ಲಿ 125 ಪ್ರಥಮ ಶಿಫಾರಸ್ಸು ಘಟಕಗಳನ್ನು ಅಗತ್ಯ ಮಾನವ ಸಂಪನ್ಮೂಲ, ಉಪಕರಣ ಮತ್ತು ತರಬೇತಿಯನ್ನು ನೀಡಿ 24/7 ಸಮಗ್ರ ಮಾತೃ ಆರೈಕೆಯನ್ನು ನೀಡಲು ಅನುಕೂಲವಾಗುತ್ತದೆ.

**9. Midwifery initiative :**

ಗೌರವಯುತ ಮಾತೃ ಆರೈಕೆಯನ್ನು ನೀಡಲು, ಹೆಚ್ಚು ಸಹಜ ಹೆರಿಗೆಗಳನ್ನು ಉತ್ತೇಜಿಸಲು ಹಾಗೂ ಸಿಜೇರಿಯನ್ ಪ್ರಮಾಣವನ್ನು ಅತ್ಯುತ್ತಮವಾಗಿಸಲು ಯೋಜನೆಯನ್ನು ಇದೀಗ ಅನುಷ್ಠಾನಗೊಳಿಸಿದೆ.

**10.ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ:**

ಪ್ರತಿ ತಿಂಗಳು 9 ನೇ ತಾರೀಖಿನಂದು ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (PMSMA) ಕಾರ್ಯಕ್ರಮವನ್ನು ರಾಜ್ಯದ **1051** ಆರೋಗ್ಯ ಸಂಸ್ಥೆಯಲ್ಲಿ ನೆಡೆಸಲಾಗುತ್ತಿದೆ ಈ ದಿನದಂದು ವಿಶೇಷವಾಗಿ ಗರ್ಭಿಣಿಯರಿಗೆ ಗುಣಮಟ್ಟದ ತಪಾಸಣೆಯನ್ನು ನುರಿತ ತಜ್ಞರಿಂದ ನಡೆಸಲಾಗುತ್ತದೆ. ಈ ದಿನದಂದು ಆರೈಕೆಯ ಜೊತೆ ಪೌಷ್ಠಿಕಾಂಶದ ಆಪ್ತ ಸಮಲೋಚನೆ, Birth planning ಇತ್ಯಾದಿ ಸೇವೆಗಳನ್ನು ನೀಡಲಾಗುತ್ತಿದೆ. ಈ ದಿನದಂದು ಖಾಸಗಿ ವಲಯದ ತಜ್ಞರು ಇಲಾಖೆಜೊತೆ ಕೈಜೋಡಿಸಿ ಮಾಡಲಾಗುತ್ತಿದೆ.

**11. ವಿಸ್ತೃತ ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (e-PMSMA):**

ಗುಣಾತ್ಮಕ ಪ್ರಸವಪೂರ್ವ ಆರೈಕೆಯನ್ನು ನೀಡಲು (ಅಂದರೆ ಹಿಮೋಗ್ಲೋಬಿನ್ % ಅನ್ನು ಪತ್ತೆ ಹಚ್ಚುವಿಕೆ , ರಕ್ತದ ಒತ್ತಡ ಪತ್ತೆ ಹಚ್ಚುವಿಕೆ ಮುಂತಾದ ಅಂಶಗಳನ್ನು ಎಲ್ಲಾ ಗರ್ಭಿಣಿಯರಿಗೆ 9 ನೇ ತಾರೀಖಿನಂದು ನೆರವೇರಿಸಲಾಗುತ್ತಿದೆ. ಮುಂದುವರೆದು, ತೊಡಕಿನ ಗರ್ಭದಾರಣೆಗಳನ್ನು (ಅಂದರೆ ಅಧಿಕ ರಕ್ತದೊತ್ತಡ ತೀವ್ರತರಹದ ರಕ್ತಹೀನತೆ, ಗರ್ಭಾವಸ್ಥೆಯಲ್ಲಿನ ಸಕ್ಕರೆ ಅಂಶ ಮುಂತಾದ ಕ್ಲಿಷ್ಟಕರ ಗರ್ಭಿಣಿಯರನ್ನು ಹೆಚ್ಚುವರಿಯಾಗಿ ಪ್ರತಿ ತಿಂಗಳು 24ನೇ ತಾರೀಖಿನಂದು ಹೆಚ್ಚುವರಿ ತಪಾಸಣೆಯನ್ನು ಮಾಡಲಾಗುತ್ತಿದೆ) ಇದರಿಂದ ತೊಡಕುಗಳನ್ನು ನಿವಾರಿಸಲು ಸಹಾಯವಾಗುತ್ತಿದ್ದು, ಮುಂಬರುವ ದಿನಗಳಲ್ಲಿ ಗುಣಾತ್ಮಕ ಪ್ರಸವಪೂರ್ವ ಆರೈಕೆಯನ್ನು ನೀಡುವುದರಿಂದ ತಾಯಿ ಮರಣಗಳನ್ನು ಕಡಿಮೆ ಮಾಡಬಹುದಾಗಿರುತ್ತದೆ.

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
[illegible] 009

**ಅನುಬಂಧ-4 ಪ್ರಶ್ನೆ-371**

**ಪ್ರಸ್ತುತ ತಾಯಿ ಮರಣ ಪ್ರಮಾಣವು 2018-20ರ ಸಮೀಕ್ಷಾ ವರದಿಯಂತೆ 69 ಇದ್ದು 2025ರ ಒಳಗೆ ಇನ್ನಷ್ಟು ಕಡಿಮೆಗೊಳಿಸಲು ಇಲಾಖೆಯು ಕ್ರಮ ಕೈಗೊಳ್ಳುತ್ತಿದೆ.**

1. ಕೆಳ ಹಂತದ ಆಸ್ಪತ್ರೆಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ 24x7 ಹೆರಿಗೆಗಾಗಿ ಕಾರ್ಯಗತಗೊಳಿಸಲಾಗುವುದು.
2. ಕೆಳ ಹಂತದ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು & ಸಿಬ್ಬಂದಿಗಳಿಗೆ ಕೌಶಲ್ಯ ಆಧಾರಿತ ದಕ್ಷತಾ ಹಾಗು ದಕ್ಷತ ತರಬೇತಿಯನ್ನು ನೀಡಲಾಗುತ್ತಿದ್ದು ಪುನರ್ಮನನ ತರಬೇತಿಯನ್ನು ನೀಡಲಾಗುವುದು
3. ಕೆಳಹಂತದ ಆಸ್ಪತ್ರೆಗಳ ಕಾರ್ಯನಿರ್ವಾಹಣಾ ಅಂಶಗಳಾದ ಮಾಸಿಕ ಹೆರಿಗೆಗಳು, ಗುಣಮಟ್ಟ ಗರ್ಭಿಣಿ ಬಾಣಂತಿಯರ ಆರೈಕೆ ಮುಂತಾದವುಗಳನ್ನು ಮೇಲ್ವಿಚಾರಣೆ ಮಾಡಲಾಗುವುದು.
4. ಕೆಳ ಹಂತದ ಆಸ್ಪತ್ರೆಗಳ referral (ಶಿಫಾರಸ್ಸು) ಪ್ರತಿ ತಿಂಗಳು ಮೇಲ್ವಿಚಾರಣೆ ಮಾಡಲಾಗುವುದು.
5. ಪ್ರತಿ ಒಂದು ತಾಯಿ ಮರಣವನ್ನು ಕಟ್ಟುನಿಟ್ಟಾಗಿ Audit ಗಳನ್ನು ಆಯಾ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಸಲಾಗುತ್ತಿದ್ದು ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಮಾಡಲಾಗುವುದು.

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009

**ಅನುಬಂಧ-05**

**ಶಿಶು ಮರಣ ಪ್ರಮಾಣ ಬಗ್ಗೆ:** ಶಿಶು ಮರಣಗಳನ್ನು ತಡೆಯಲು ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ವೈದ್ಯಕೀಯ ಮಹಾವಿದ್ಯಾಲಯಗಳ ಆಸ್ಪತ್ರೆಗಳನ್ನೊಳಗೊಂಡಂತೆ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ.

ಶಿಶುಗಳ ಆರೋಗ್ಯ ಸೇವೆಗಾಗಿ ಅತ್ಯವಶ್ಯ ಅಗತ್ಯವಾದ ಉಪಕರಣಗಳನ್ನು ಪ್ರತಿ ಕೇಂದ್ರಗಳಲ್ಲಿ ಲಭ್ಯವಿರಿಸಲಾಗಿದೆ.
ಶಿಶುಗಳ ವೈದ್ಯಕೀಯ ಸೇವೆಗಳಿಗಾಗಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸುವ ಉದ್ದೇಶದಿಂದ ಸೌಲಭ್ಯ ಆಧಾರಿತ ನವಜಾತ ಶಿಶು ಆರೈಕೆ ಸೇವೆಗಳು, ಸಮುದಾಯ ಜಾಗೃತಿ ಕಾರ್ಯಕ್ರಮಗಳು, ಆರೋಗ್ಯ ಸಿಬ್ಬಂದಿ ಸಾಮರ್ಥ್ಯ ವರ್ಧನೆ ಮತ್ತು ಆರ್ಥಿಕ ನೆರವು ಯೋಜನೆಗಳಂತಹ ಸೇವೆಗಳನ್ನು ಒದಗಿಸುವ ಕ್ರಮಕೈಗೊಳ್ಳಲಾಗುತ್ತಿದೆ. ವಿವರಗಳು ಕೆಳಕಂಡಂತಿವೆ.

**ಆರೋಗ್ಯ ಸೇವೆಗಳು:**

- **ಸೌಲಭ್ಯ ಆಧಾರಿತ ಸೇವೆಗಳು:** ರಾಜ್ಯದಲ್ಲಿ ಶಿಶುಗಳ ಆರೈಕೆಗಾಗಿ ಬಹುಹಂತದ ಸೌಲಭ್ಯ ಆಧಾರಿತ ಸೇವೆಗಳನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ.
- **ನವಜಾತ ಶಿಶು ಆರೈಕೆ ಕಾರ್ನರ್ (NBCC)**
  ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಮಟ್ಟದ ಆಸ್ಪತ್ರೆಗಳು ಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಜನನವಾದ ತಕ್ಷಣವೇ ನವಜಾತ ಶಿಶುವಿನ ಆರೈಕೆಗಾಗಿ ಪ್ರತ್ಯೇಕವಾದ ಸುಸಜ್ಜಿತ ಆರೈಕೆ ಕಾರ್ನರ್‌ಗಳನ್ನು ಸ್ಥಾಪಿಸಲಾಗಿದೆ. ಹೆರಿಗೆ ಕೊಠಡಿಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಗುವನ್ನು ಬೆಚ್ಚಗಿಡಲು ರೇಡಿಯಂಟ್ ವಾರ್ಮರ್ ಸೌಲಭ್ಯ ಒದಗಿಸಲಾಗಿದೆ ಹಾಗೂ ಪ್ರಸವ ಸಮಯದಲ್ಲಿ ಉಸಿರುಗಟ್ಟುವಿಕೆಯಾದಲ್ಲಿ ಚಿಕಿತ್ಸೆ ನೀಡಲು ಅಗತ್ಯ ಉಪಕರಣ ಹಾಗೂ ಆಕ್ಸಿಜನ್ ಸೌಲಭ್ಯವನ್ನು ನೀಡಲಾಗುತ್ತಿದೆ.

- **ನವಜಾತ ಸ್ಥಿರೀಕರಣ ಘಟಕ (NBSU)**
  ನವಜಾತ ಶಿಶು ಸ್ಥಿರೀಕರಣ ಘಟಕಗಳನ್ನು ಸಮುದಾಯ ಆರೋಗ್ಯಕೇಂದ್ರ/ಮೊದಲ ಶಿಫಾರಸ್ಸು ಕೇಂದ್ರ ಹಾಗೂ ತಾಲ್ಲೂಕ ಮಟ್ಟದ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.
  ಜನನ ಸಮಯದಲ್ಲಿ ತೊಂದರೆಗೊಳಗಾಗುವ ನವಜಾತ ಶಿಶುಗಳಿಗೆ ಅಗತ್ಯ ತುರ್ತು ಚಿಕಿತ್ಸೆ, ನವಜಾತ ಶಿಶುವಿನಲ್ಲಿ ಕಂಡುಬರುವ ಜಾಂಡೀಸ್ ಕಾಯಿಲೆಗೆ ಅಗತ್ಯವಿರುವ ಫೋಟೋಥೆರಪಿ ಚಿಕಿತ್ಸೆಯನ್ನು ನೀಡಲು ಉಪಕರಣಗಳನ್ನು ಒದಗಿಸಲಾಗಿದೆ ಹಾಗೂ ನವಜಾತ ಶಿಶುಗಳಲ್ಲಿ ಕಂಡುಬರುವ ಸಾಮಾನ್ಯ ಖಾಯಿಲೆಗಳಿಗೆ/ಇತ್ಯಾದಿ ತೊಂದರೆಗಳಿಗೂ ಸಹ ಚಿಕಿತ್ಸಾ ಸೌಲಭ್ಯಗಳನ್ನು ಮಕ್ಕಳ ತಜ್ಞರ ಮೂಲಕ ಹಾಗೂ ನುರಿತ ದಾದಿಯರ ಮೂಲಕ ಸೇವೆಗಳನ್ನು ಕಲ್ಪಿಸಲಾಗಿದೆ. ರಾಜ್ಯದಲ್ಲಿ ಪ್ರಸ್ತುತ 165 ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU) ಕಾರ್ಯನಿರ್ವಹಿಸುತ್ತಿವೆ.

- **ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU)**
  ಹೆಚ್ಚಿನ ಆರೋಗ್ಯದ ತೊಂದರೆ ಅನುಭವಿಸುತಿರುವ ಶಿಶುಗಳಿಗೆ ಮತ್ತು ಗಂಭೀರ ಸ್ವರೂಪದ ಖಾಯಿಲೆಗೆ ತುತ್ತಾದ ಶಿಶುಗಳಿಗೆ, ಎಲ್ಲಾ ಜಿಲ್ಲಾ ಆಸ್ಪತ್ರೆಗಳು ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಮತ್ತು ಕೆಲವು ತಾಲ್ಲೂಕು ಆಸ್ಪತ್ರೆಗಳಲ್ಲಿ ವಿಶೇಷ ನವಜಾತ ಶಿಶು ಆರೈಕೆ ಘಟಕಗಳನ್ನು ಸ್ಥಾಪಿಸಿ ಕ್ಲಿಷ್ಟಕರವಾದ ತೊಂದರೆಗಳಿಗೆ ಮಕ್ಕಳ ಆರೋಗ್ಯ ತಜ್ಞರ ಮೂಲಕ ಹಾಗೂ ತರಬೇತಿ ಹೊಂದಿದ ದಾಯಂದಿರ ದಿನದ 24 ಗಂಟೆ ನಿಗಾವಿಡುವ ರೀತಿಯಲ್ಲಿ ವೈದ್ಯಕೀಯ ಸೇವೆಗಳನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು ಐವತ್ತು ವಿಶೇಷ ನವಜಾತ ಶಿಶು ಆರೈಕೆ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

**ಉಪ ನಿರ್ದೇಶಕರು (ಮಕ್ಕಳ ಆರೋಗ್ಯ)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

## ಅನುಬಂಧ-೬

### 1. ಗೃಹ ಆಧಾರಿತ ನವಜಾತ ಶಿಶು ಆರೈಕೆ (HBNC).

ಆಶಾ ಕಾರ್ಯಕರ್ತೆಯರು ಮನೆಮನೆ ಭೇಟಿ ನೀಡಿ ಆ ಸಮಯದಲ್ಲಿ ತಾಯಿ ಮತ್ತು ಕುಟುಂಬಸ್ಥರಿಗೆ ಶಿಶುಗಳ ಪಾಲನೆ ಮತ್ತು ಆರೋಗ್ಯ ಕಾಪಾಡಿಕೊಳ್ಳುವ ಸಲುವಾಗಿ ಜಾಗೃತಿ ಮೂಡಿಸುವ ಸಂಬಂಧ ಆರೋಗ್ಯ ಮಾಹಿತಿ ಮತ್ತು ಕೌಶಲ್ಯಗಳನ್ನು ವೃದ್ಧಿಸುವ ಸಂಬಂಧ ಶಿಶುವಿನ ಆರೈಕೆಗಾಗಿ ಜನನದ ನಂತರದ ಮೊದಲ 42 ದಿನಗಳಲ್ಲಿ ಕನಿಷ್ಠ 6 ರಿಂದ 7 ಬಾರಿ ಭೇಟಿ ನೀಡುತ್ತಾರೆ.

ಆಶಾ ಕಾರ್ಯಕರ್ತೆಯರು ಭೇಟಿ ನೀಡುವ ಸಮಯದಲ್ಲಿ ನವಜಾತ ಶಿಶುವಿನ ಉತ್ತಮ ಆರೈಕೆ, ಕಡಿಮೆ ತೂಕದ ಶಿಶುಗಳಿಗೆ ವಿಶೇಷ ಆರೈಕೆ, ಶಿಶುಗಳಲ್ಲಿ ಕಂಡು ಬರುವ ಅಪಾಯದ ಲಕ್ಷಣಗಳನ್ನು ಪತ್ತೆಹಚ್ಚುವ ಮತ್ತು ಪ್ರತ್ಯೇಕ ಸ್ತನ್ಯಪಾನ ಮತ್ತು ರೋಗ ನಿರೋಧಕತೆಯನ್ನು ಉತ್ತೇಜಿಸುವ ಕಾರ್ಯಗಳನ್ನು ತಾಯಿ ಮತ್ತು ಕುಟುಂಬಸ್ಥರಿಗೆ ತಿಳಿಸಿಕೊಡುತ್ತಿದ್ದಾರೆ.

### 2. ಗೃಹ ಆಧಾರಿತ ಚಿಕ್ಕಮಕ್ಕಳ ಆರೈಕೆ (HBYC).

ಚಿಕ್ಕಮಕ್ಕಳಲ್ಲಿ (3-15 ತಿಂಗಳುಗಳು) ಅಸ್ವಸ್ಥತೆ, ಆರಂಭಿಕ ಬಾಲ್ಯದ ಬೆಳವಣಿಗೆ, ಅನಿಮಿಯ ತಡೆಗಟ್ಟಲು ಮತ್ತು ಪೌಷ್ಟಿಕಾಂಶವನ್ನು ಉತ್ತೇಜಿಸಲು, ಮಕ್ಕಳಲ್ಲಿ Iron and Folic Acid Syrup ನ್ನು 1ml ವಾರಕ್ಕೆ ಎರಡುಬಾರಿ ಆರು ತಿಂಗಳಿಂದ 59 ತಿಂಗಳವರೆಗಿನ ಮಕ್ಕಳಿಗೆ ಸರ್ವಾಂಗೀಣ ಅಭಿವೃದ್ಧಿಗಾಗಿ ಕುಟುಂಬಸ್ಥರಿಗೆ ಮನವರಿಕೆ ಮಾಡಿಕೊಡುತ್ತಾರೆ. ಆಶಾ ಕಾರ್ಯಕರ್ತೆಯರು ಪ್ರತಿ ಮೂರು ತಿಂಗಳಿಗೆ ಒಂದರಂತೆ ಮಗುವಿನ ಆರೋಗ್ಯಕ್ಕೆ ಸಂಬಂಧಿಸಿದ ನಿರ್ದಿಷ್ಟ ಅಂಶಗಳತ್ತ ಗಮನ ನೀಡಲು ಕನಿಷ್ಠ ಐದು ಭೇಟಿಗಳನ್ನು ನೀಡುತ್ತಿದ್ದಾರೆ. ಭೇಟಿಯ ಸಮಯದಲ್ಲಿ ಆಶಾ ಕಾರ್ಯಕರ್ತೆಯರು 6 ತಿಂಗಳವರೆಗೆ ಪ್ರತ್ಯೇಕ ಸ್ತನ್ಯಪಾನಕ್ಕಾಗಿ ಕುಟುಂಬಸ್ಥರಲ್ಲಿ ಸಮಾಲೋಚನೆ ಮತ್ತು ನಂತರ ಸಾಕಷ್ಟು ಪೂರಕ ಆಹಾರದೊಂದಿಗೆ ಸ್ತನ್ಯಪಾನವನ್ನು ಮುಂದುವರಿಸುವುದು, ತಾಯಂದಿರು ಮತ್ತು ಕುಟುಂಬಸ್ಥರ ಸಮಾಲೋಚನೆಯೊಂದಿಗೆ ಅರಿವು ಮೂಡಿಸಿ ಬೆಂಬಲಿಸುವ ಕಾರ್ಯನಿರ್ವಹಿಸುತ್ತಿದ್ದಾರೆ.

### 3. ಸಮುದಾಯ ಜಾಗೃತಿ ಕಾರ್ಯಕ್ರಮಗಳು:

❖ **ತೀವ್ರವಾದ ಅತಿಸಾರ ನಿಯಂತ್ರಣ ಪಾಕ್ಷಿಕ (IDCF)**

ಮಕ್ಕಳಲ್ಲಿ ಮರಣಕ್ಕೆ ಪ್ರಮುಖ ಕಾರಣವಾದ ತೀವ್ರತರ ಅತಿಸಾರಬೇದಿಯನ್ನು ನಿಯಂತ್ರಿಸಲು ಅತಿಸಾರ ನಿಯಂತ್ರಣ ಪಾಕ್ಷಿಕ 15 ದಿನಗಳ ಆಚರಣೆಯನ್ನು ಪ್ರತಿ ವರ್ಷವು ಆರೋಗ್ಯ ಇಲಾಖೆಯು ಎಲ್ಲಾ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳೊಂದಿಗೆ ಕೈಜೋಡಿಸುವುದರ ಮೂಲಕ ಜನ ಸಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸುತ್ತಿದೆ.

ಆಶಾ ಕಾರ್ಯಕರ್ತೆಯರು ಈ ಪಾಕ್ಷಿಕದ ಸಮಯದಲ್ಲಿ ಐದು ವರ್ಷದೊಳಗಿನ ಮಕ್ಕಳಿರುವ ಮನೆಗೆ ಭೇಟಿ ನೀಡಿ ORS ಪೊಟ್ಟಣಗಳನ್ನು ಬಳಸುವುದರ ಬಗ್ಗೆ ಮಾಹಿತಿ ನೀಡಿ ಪೂರ್ವ ಸ್ವಾಧಿಕವಾಗಿ ORS ಪೊಟ್ಟಣಗಳನ್ನು ನೀಡುತ್ತಾರೆ.

ಅತಿಸಾರಬೇದಿ ನಿಯಂತ್ರಣಕ್ಕೆ ಪ್ರಮುಖ ಅಂಶಗಳಾದ ಸ್ವಚ್ಛತೆ, ನೈರ್ಮಲ್ಯ ಕುಡಿಯುವ ನೀರಿನ ಸ್ವಚ್ಛತೆಯ ಬಗ್ಗೆ ಗ್ರಾಮೀಣ ಹಾಗೂ ಕೊಳಗೇರಿಯಲ್ಲಿ ವಾಸಿಸುವ ಜನ ಸಾಮಾನ್ಯರಲ್ಲಿ ಅರಿವು ಮೂಡಿಸಿ ಅತಿಸಾರಬೇದಿಯಿಂದ ಬಳಲುತ್ತಿರುವ ಮಕ್ಕಳಿಗೆ ORS ಪೊಟ್ಟಣ ಮತ್ತು Zinc Sulphate ಮಾತ್ರೆಗಳನ್ನು ಬಳಸಲು ಉತ್ತೇಜಿಸುವುದರ ಮೂಲಕ ಕುಟುಂಬಸ್ಥರಲ್ಲಿ ಅತಿಸಾರಬೇದಿಯಿಂದ ಮರಣವನ್ನು ತಡೆಯುವ ಸಂಬಂಧ ಅರಿವು ಮೂಡಿಸುವ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆ.

❖ **ನ್ಯುಮೋನಿಯಾವನ್ನು ಯಶಸ್ವಿಯಾಗಿ ತಟಸ್ಥಗೊಳಿಸಲು ಸಾಮಾಜಿಕ ಜಾಗೃತಿ ಮತ್ತು ಕ್ರಮ (SAANS).**

ನ್ಯುಮೋನಿಯಾ ಖಾಯಿಲೆಯು ಮಕ್ಕಳ ಮರಣಕ್ಕೆ ಬಹುಮುಖ್ಯ ಕಾರಣವಾಗಿದ್ದು ಪ್ರತಿ ವರ್ಷ ನವೆಂಬರ್ ಮಾಹೆಯಿಂದ ಫೆಬ್ರುವರಿ ಮಾಹೆವರೆಗೂ ಸಾಮಾಜಿಕ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಗುವುದು. ಈ ಸಮಯದಲ್ಲಿ ಆಶಾ ಕಾರ್ಯಕರ್ತೆಯರು ಐದು ವರ್ಷದೊಳಗಿರುವ ಮಕ್ಕಳಿರುವ ಮನೆಗಳಿಗೆ ಭೇಟಿ ನೀಡಿ ಶ್ವಾಸಕೋಶದ ಸಂಬಂಧಿತ ರೋಗಗಳ ಅಪಾಯಕಾರಿ ಲಕ್ಷಣಗಳನ್ನು ಗುರುತಿಸಿ ಅವುಗಳ ನಿರ್ವಹಣೆ ಮತ್ತು ಅನುಸರಣೆಗಾಗಿ ಅನಾರೋಗ್ಯ ಪೀಡಿತ ಮಕ್ಕಳನ್ನು ಹತ್ತಿರದ ಆರೋಗ್ಯ ಕೇಂದ್ರ ಸೌಲಭ್ಯಗಳಿಗೆ ತ್ವರಿತವಾಗಿ ಕೊಂಡ್ಯೊಯಲು ಕುಟುಂಬಸ್ಥರಿಗೆ ಮನವರಿಕೆ ಮಾಡುತ್ತಿದ್ದಾರೆ

ಉಪ ನಿರ್ದೇಶಕರು - ಮಕ್ಕಳ ಆರೋಗ್ಯ
[illegible]
[illegible]
ಬೆಂಗಳೂರು - 560023